ಮಾಡಿದರು ಎಂದು ಸರ್ಕಾರಕ್ಕೆ ದೂರು ಕೊಟ್ಟವರಾರು ?

ಶ್ರೀ ಟಿ. ಚನ್ನಯ್ಯ.—ಶ್ರೀ ಬಸವರಾಜ್ ಮತ್ತು ವಿಶ್ವನಾಥ್ ಎಂಬವರು.

ಶ್ರೀ ಎಸ್. ಗೋಪಾಲಗೌಡ.—ಇಬ್ಬರೂ ಸೇರಿ ಕೊಟ್ಟಿದ್ದಾರೆಯೆ ದೂರನ್ನು ?

ಶ್ರೀ ಟಿ. ಚನ್ನಯ್ಯ.—ಬೇರೆ ಬೇರೆ ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಬೇರೆ ಬೇರೆ ಅರ್ಜಿಗಳನ್ನು ಬರೆದಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಬಸವರಾಜ್ ಎಂಬವರು ಸರ್ಕಾರಕ್ಕೆ ದೂರು ಕೊಟ್ಟಿದ್ದಾರೆ, ವಿಶ್ವನಾಥ್ ಎಂಬವರು ಡೆಪ್ಯುಟಿಕಮೀಷನರಿಗೆ ದೂರು ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಅವರಿಬ್ಬರೂ ಕೌನ್ಸಿಲ್‌ಗೆ ಆರಿಸಿ ಬಂದಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಗೋಪಾಲಗೌಡ.—ಅವರು ಯಾವ ಪಕ್ಷಕ್ಕೆ ಸೇರಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

Mr. SPEAKER.—He cannot say that.

ಶ್ರೀ ಎಸ್. ಗೋಪಾಲಗೌಡ.—ಅವರಿಬ್ಬರನ್ನೂ ಕೌನ್ಸಿಲಿನಿಂದ ತೆಗೆದುಹಾಕಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಒಂದು ತೀರ್ಮಾನವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಬೇರೆ dispute ಇದೆ.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ತೆಗೆದು ಹಾಕಿದಮೇಲೆ ತಾನೆ ಅವರು ದೂರು ಕೊಟ್ಟಿರುವುದು ?

ಶ್ರೀ ಟಿ. ಚನ್ನಯ್ಯ.—ಇನ್ನೂ ಮುಂಚೆಯೇ ದೂರು ಕೊಟ್ಟಿದ್ದರು.

ಶ್ರೀ ಎಸ್. ಗೋಪಾಲಗೌಡ.—ಈ ರೀತಿ ಪೌರ ಸಭೆಯಲ್ಲಿ ತಪ್ಪು ನಡೆದುಕೊಂಡಿದ್ದಾರೆಂದು ಚರ್ಚೆ ನಡೆದು ನಿರ್ಣಯಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ನಿರ್ಣಯ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಇಂಥ ನಿರ್ಣಯಗಳನ್ನು ಪಾನು ಮಾಡಿದ್ದಾರೆಯೆ ? ಪೌರ ಸಭಾಧ್ಯಕ್ಷರ ಮೇಲೆ ಲಂಚದ ಆಪಾದನೆ ಮಾಡಿ ಮತ್ತು ಪೌರ ನಧೆಯ ಹಣವನ್ನು ದುರುಪಯೋಗಪಡಿಸಿದ್ದಾರೆಂದು ನಿರ್ಣಯವನ್ನು ಪಾನು ಮಾಡಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ನಿರ್ಣಯ ಮಾಡಿಲ್ಲ, ಆದರೆ ಸರಬರಾಜು ಮಾಡತಕ್ಕ materials ವಿಷಯದಲ್ಲಿ ಅನುಮಾನ ಬಂದು ಚರ್ಚೆ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ, ಸಿದ್ದಪ್ಪನವರು ತಮ್ಮ ಪಾರ್ಟಿಗೆ ವಿರೋಧವಾಗಿದ್ದಾರೆಂದು ತಾನೆ ಈ ರೀತಿ ದೂರುಮಾಡಿರುವುದು ?

ಶ್ರೀ ಟಿ. ಚನ್ನಯ್ಯ.—ಅಭಿಪ್ರಾಯದ ಮಾತು.

ಶ್ರೀ ಜಿ. ದುಗ್ಗಪ್ಪ.—ದೂರು ಕೊಟ್ಟಿರುವ ಸದಸ್ಯರು ಹಿಂದೆ ತಾವು ಸದಸ್ಯರಾಗಿರಬೇಕಾದರೆ, ರಾಜೀನಾಮೆ ಕೊಟ್ಟಿದ್ದಾರೆಯೆ ?

Mr. SPEAKER.—That does not arise. If it is a matter which requires investigation, they will do it.

ಶ್ರೀ ಜಿ. ದುಗ್ಗಪ್ಪ.—ದೂರು ಕೊಟ್ಟಿರುವವರು ಹಿಂದೆ ತಮ್ಮ ಕೌನ್ಸಿಲರ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರೆ ?

ಶ್ರೀ ಟಿ. ಚನ್ನಯ್ಯ.—ಕೌನ್ಸಿಲ್‌ಗೆ ರಾಜೀನಾಮೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ, ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಅದು disputeನಲ್ಲಿದೆ.

ಶ್ರೀ ಜಿ. ದುಗ್ಗಪ್ಪ.—ರಾಜೀನಾಮೆ ಅಂಗೀಕಾರವಾದ ಮೇಲೆ ದೂರು ಕೊಟ್ಟಿರುವರೆ ?

ಶ್ರೀ ಟಿ. ಚನ್ನಯ್ಯ.—ಮುಂಚಿತವಾಗಿ ಕೊಟ್ಟಿದ್ದಾರೆ.

Mr. SPEAKER.—I think we should go to the next question. For such a small question I do not think that we should take up so much time.

ಶ್ರೀ ಬಿ. ಹುಚ್ಚೇಗೌಡ.—ಅವರು ಅಧ್ಯಕ್ಷರಾದ ಮೇಲೆ ಮುನಿಸಿಪಲ್ ತೆರಿಗೆ ವಗ್ಗೆರೆಯ ವನೂಲೆ ಕಟ್ಟುನಿಟ್ಟಾಗಿ ಮಾಡಿದುದಕ್ಕಾಗಿ ಅಲ್ಲಿನ ವರ್ತಕರು ಸೇರಿ ದೂರು ಕೊಟ್ಟಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

Sri G. SIVAPPA.—Is it not a fact that there are two rival groups in the Municipal Council ?

Sri T. CHANNIAH.—Yes, there are.

Sri J. MOHAMED IMAM.—I rise to a point of order, Sir. I think the matter is *sub judice*.

Mr. SPEAKER.—I do not think it is so. It is only under investigation.

Sri J. MOHAMED IMAM.—No, Sir, this matter is before the High Court.

Mr. SPEAKER.—I am sorry, I did not know. Then I do not allow any questions to be put.

Estimates Committee Report.

Q.—49. Sri B. NARAYANASWAMY (Mysore South).—

Will the Government be pleased to state :—

the action taken on the report of the Estimates Committee placed before the House during the last Sessions ?

A.—Sri Kadidal MANJAPPA (Minister for Revenue and Public Works).—

It is under examination in consultation with the Chief Engineer.

Sri B. NARAYANASWAMY.—I have no supplementaries.

Foot bridge across the Cauvery near Sivasamudram.

Q.—130. Sri B. P. NAGARAJAMURTHY (Malavalli).—

Will the Government be pleased to state :—

(SRI B. P. NAGARAJA MURTHY.)

(*a*) what is the estimate of the foot bridge to be constructed across the Cauvery river near Sivasamudram ;

(*b*) whether any tenders were called for the construction of this bridge ;

(*c*) if so, who are those that had given tenders and what are their quotations ;

(*d*) whose tender was accepted ;

(*e*) whether the construction has commenced ?

A.—**Sri Kadidal MANJAPPA** (Minister for Revenue and Public Works).—

(*a*) Rs. 73,500.

(*b*) Yes.

	Rs.
(*c*) Sri B. N. Kappanna	1,10,660
Sri V. Nanjappa ...	88,935
Sri B. Nanjappa ...	87,495

(*d*) That of Sri B. Nanjappa.

(*e*) Yes.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಂದಾಜನ್ನು ತಯಾರು ಮಾಡುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಂದಾಜು ತಯಾರು ಮಾಡುವುದು ಆ ಕೆಲಸ ಅಪ್ಪರಲ್ಲಿ ಆಗುತ್ತದೆಂದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಅಂದಾಜದಷ್ಟು ಅಥವಾ ಅದಕ್ಕಿಂತ ಕಡಮೆಯಾದ ಮೊಬಲಗಿಗೆ ಟೆಂಡರ್ ಬರುವುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡಮೆ, ಕೆಲವು ಜಾಸ್ತಿ ದರಗಳಿರುತ್ತವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಇದು ಅಂದಾಜಿಗಿಂತ ಶೇಕಡ 20ರಷ್ಟು ಜಾಸ್ತಿಯಾಗಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ಹಿಂದೆ ಅಂದಾಜು ಮಾಡಿದರೆ ಆ ರೀತಿ ಆಗುತ್ತದೆ. ಈ ಕೆಲಸಕ್ಕೆ ಸಂಬಂಧಪಟ್ಟ ಅಂದಾಜು 1951ನೆಯ ಇಸವಿಯಲ್ಲಿ ಮಾಡಿದ್ದು, ಆದುದರಿಂದ ಸ್ವಲ್ಪ ವ್ಯತ್ಯಾಸವಾಗಿದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಹಾಗಾದರೆ ಅಂದಾಜು ಮಾಡಿದ ತಾರೀಖಿಗೂ ಟೆಂಡರುಗಳು ಬಂದ ತಾರೀಖಿಗೂ ಎಷ್ಟು ದಿವಸ ವ್ಯತ್ಯಾಸ ?

ಶ್ರೀ ಕಡಿದಾಳ್ ಮಂಜಪ್ಪ.—1952ನೆಯ ಇಸವಿಯಲ್ಲಿ ಅಂದಾಜು ಮಂಜೂರಾಯಿತು,—ನರ್ಕಾರ 1954ರಲ್ಲಿ ಟೆಂಡರನ್ನು ಒಪ್ಪಿದರು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಇಷ್ಟು ಹೆಚ್ಚು ಅಂದರೆ ಶೇಕಡ 20ರಷ್ಟು ಜಾಸ್ತಿಯಿರುವುದರಿಂದ ಇಲಾಖೆಯ ಮೂಲಕವೇ ಮಾಡುವುದು ಸೂಕ್ತವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡಿದ್ದೇವೆ, ಅನೇಕ ಸಂದರ್ಭಗಳಲ್ಲಿ ಇಲಾಖೆಯ ಮೂಲಕ ಮಾಡುವುದು ಖರ್ಚು ಜಾಸ್ತಿಯಾಗುತ್ತದೆ, ಸಿಬ್ಬಂದಿ ಜಾಸ್ತಿ ಬೇಕಾಗುತ್ತದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಸಂಬಂಧಪಟ್ಟ ಎಗ್ಸಿಕ್ಯುಟಿವ್ ಇಂಜಿನಿಯರಿಂದ ಇಲಾಖೆಯ ಮೂಲಕ ಮಾಡುವುದು ಸೂಕ್ತವೆಂದು ವರದಿ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ನೆನಪಿಲ್ಲ, ಹಾಗೆ ಅದೇ ಅನುಕೂಲವಾಗಿದ್ದಿದ್ದರೆ ಟೆಂಡರನ್ನು ಒಪ್ಪುತ್ತಲೇ ಇರಲಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—73,000 ರೂಪಾಯಿಗೆ ಅಂದಾಜು ಮಂಜೂರು ಮಾಡಿರುವಾಗ ಒಂದು ಲಕ್ಷ ಚಿಲ್ಲರೆ ರೂಪಾಯಿಗೆ ಯಾವ ಆಧಾರದ ಮೇಲೆ ಟೆಂಡರ್ ಕೊಟ್ಟರು ?

ಶ್ರೀ ಕಡಿದಾಳ್ ಮಂಜಪ್ಪ.—Workable rates ಮೇಲೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಷ್ಟು ರೂಪಾಯಿಗೆ ಅಂದಾಜು ಮಂಜೂರಾಗಿದೆ ಎಂದು ಅದರ ಆಧಾರದ ಮೇಲೆ ತಾನೆ ಟೆಂಡರ್ ಕರೆಯುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹೀಗೆ 87 ಸಾವಿರ ಚಿಲ್ಲರೆಗೆ ಟೆಂಡರ್ ಬಂದ ಮೇಲೆ ಅಂದಾಜನ್ನು ರಿವೈಸ್ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಮೇಲೆ ಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ರೀಜೆಂಡರ್ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸೂಕ್ತವಲ್ಲವೆಂಬ ಅಭಿಪ್ರಾಯ ಬಂದಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ lowest tender ಒಪ್ಪಿ ಆಮೇಲೆ ರಿವೈಸ್ಡ್ ಅಂದಾಜು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಸಮಯ ಸನ್ನಿವೇಶಗಳನ್ನವಲಂಬಿಸುತ್ತದೆ.

Chitravathi Anecut near Thirumani.

Q.—289. **Sri B. V. NARAYANA REDDY** (Bagepalli-Gudibanda).—

Will the Government be pleased to state :—

whether the Chitravathi anecut near Thirumani is inculded in the Second Five-Yer Plan ; if so, when the work will be started ?

A.—**Sri Kadidal MANJAPPA** (Minister for Revenue and Public Works).—

This is included in the First Five-Year Plan. It is proposed to continue this to the Second Five-Year Plan also. The work is to be taken up soon.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಜಾಗ್ರತೆ ಕೆಲಸವನ್ನು ಕೈಕೊಳ್ಳಬೇಕೆಂದು ಹೇಳುತ್ತೀರಿ, ಇದುವರೆಗೂ ಏಕೆ ತೆಗೆದುಕೊಳ್ಳಲಿಲ್ಲ ?